# ಭೋಜನ ವಿಧಿ

## ೧.ಭೋಜನ ಸಂಕಲ್ಪ –

ಪಂಚಾರ್ದ್ರೋ ಭೋಜನಂ ಕುರ್ಯಾತ್ ಪ್ರಾಗ್ಮುಖೋ ಮೌನಮಾಸ್ಥಿತ: ।
ಹಸ್ತೌ ಪಾದೌ ತಥೈವಾಸ್ಯಮೇಷು ಪಂಚಾದ್ರತಾ ಮತಾ ॥

– ವ್ಯಾಸಸ್ಮೃತಿ

- ಭೋಜನದ ಮೊದಲು ಕೈಕಾಲು, ಬಾಯಿ ಶುದ್ಧಿ ಮಾಡಬೇಕು. ಪಂಚಾರ್ದ್ರವುಳ್ಳವನ್ನಾಗಿ ಭೋಜಿಸಬೇಕು.

- ಭೋಜನದ ಆದಿಯಲ್ಲಿ ಮತ್ತು ಅಂತ್ಯದಲ್ಲಿ ಆಚಮನವನ್ನು ಮಾಡಬೇಕು. ಪ್ರಾಣಾಯಾಮ ಮಾಡಿ "ಪ್ರಾಣಾಗ್ನಿಹೋತ್ರಂ ಕರಿಷ್ಯೇ" ಎಂದು ಸಂಕಲ್ಪಿಸಬೇಕು.

- ಈ ಹೋಮದಲ್ಲಿ ನಮ್ಮ ಹೃದಯವನ್ನು ಗಾರ್ಹಪತ್ಯಾಗ್ನಿಯಾಗಿಯೂ, ಮನಸ್ಸನ್ನು ದಕ್ಷಿಣಾಗ್ನಿಯಾಗಿಯೂ, ಮುಖವು ಆಹವನೀಯಾಗ್ನಿಯನ್ನಾಗಿ ಚಿಂತಿಸಬೇಕು. ಭೋಜಿಸುವರಲ್ಲಿ ಸಂಕರ್ಷಣ ಮತ್ತು ಪ್ರದ್ಯುಮ್ನನನ್ನು ಅನುಸಂಧಾನಿಸಬೇಕು. ನಾರಾಯಣ ಮತ್ತು ಅನಿರುದ್ಧರು ಭೋಜನದ ವಸ್ತುಗಳಲ್ಲಿ ಇರುವನು. ವಾಸುದೇವನು ಭೋಜನ ಮಾಡಲು ಅವಕಾಶವನ್ನು ಕಲ್ಪಿಸುವನೆಂದು ಚಿಂತಿಸಿ ಭೋಜಿಸಬೇಕು.

೨. **ಮಂಡಲ** – ಭೋಜನ ಪ್ರಾರಂಭದಲ್ಲಿ ಭೂಮಿ ಶುದ್ಧಿಯು ಅವಶ್ಯಕವಾಗಿದೆ. ಆದ್ದರಿಂದ ಭೂಮಿಯಲ್ಲಿ ಮಂಡಲ ಮಾಡುವುದರ ಮೂಲಕ ಶುದ್ಧಿ ಮಾಡಬಹುದಾಗಿದೆ. ಈಶಾನ್ಯ ಮೂಲೆಯಿಂದ ಪ್ರಾರಂಭಿಸಿ ಪುನ: ಈಶಾನ್ಯಕ್ಕೇ ಮುಗಿಯುವಂತೆ ಚತುರಸ್ರಾಕಾರವಾಗಿ ಮಂಡಲ ಮಾಡಬೇಕು.

೩. **ಮಂಡಲ ಯಾಕೆ ಮಾಡಬೇಕು?** – ಭೋಜನ ಪೂರ್ವದಲ್ಲಿ ಮಾಡುವ ಮಂಡಲದಲ್ಲಿ ಬ್ರಹ್ಮಾದಿ ದೇವತೆಗಳು, ವಸಿಷ್ಠಾದಿ ಋಷಿಗಳು, ಆದಿತ್ಯರು, ವಸುಗಳು, ರುದ್ರರು ಇರುವರು.

" ಬ್ರಹ್ಮಾದ್ಯಾ ಸುರಾಸ್ಸರ್ವೇ ವಸಿಷ್ಠಾದ್ಯಾ ಮಹರ್ಷಯ: ।
ಆದಿತ್ಯಾ ವಸವೋ ರುದ್ರಾ: ಬ್ರಹ್ಮಾಚೈವ ಪಿತಾಮಹ: ।
ಮಂಡಲಂ ತೂಪಜೀವಂತಿ ತಸ್ಮಾತ್ ಕುರ್ವೀತ ಮಂಡಲಮ್ ।"

ಮಂಡಲ ಮಾಡದೆ ಭುಂಜಿಸಿದರೆ ರಾಕ್ಷಸರು, ಪಿಶಾಚಾದಿಗಳು, ಅಸುರರೂ ನಾವು ತಿನ್ನುವ ಆಹಾರದ ಶಕ್ತಿಯನ್ನು ಹಾಳು ಮಾಡುವರು. ತಾನೇ ಮಂಡಲವನ್ನು ಮಾಡಿಕೊಳ್ಳಬಾರದು, ತನಗಾಗಿ ಇತರರಿಂದ ಮಾಡಿಸಬಹುದು. ಬೇರೆ ಯಾರೂ ಇಲ್ಲದ ಸಂದರ್ಭದಲ್ಲಿ ತನ್ನ ಎಡಗೈಯಿಂದ ತಾನು ತನಗಾಗಿ ಮಂಡಲವನ್ನು ಮಾಡಿಕೊಳ್ಳಬಹುದು, (ಏಕೆಂದರೆ ಎಡಗೈ – ಪರಹಸ್ತವೆಂದೇ ಪ್ರಸಿದ್ಧಿಯಾಗಿದೆ)

೪. **ಭುಂಜಿಸುವ ದಿಕ್ಕು** – ನಾವು ಪೂರ್ವದಿಕ್ಕಿಗೆ ಅಭಿಮುಖವಾಗಿ ಭುಂಜನ ಪ್ರಶಸ್ತ್ಯ.

೫. **ಪರಿಶೇಷನ** – ಮೊದಲು ಎಲೆಯಲ್ಲಿ ಬಡಿಸಿದ ಆಹಾರಗಳಿಗೆ ಗಾಯತ್ರಿ ಮಂತ್ರ ಮತ್ತು ಮೂಲ ಮಂತ್ರ ಉಚ್ಚರಿಸಿ ಪ್ರೋಕ್ಷಿಸಬೇಕು. ಅನಂತರ ಬಲಗೈಯ ಮಧ್ಯಭಾಗದಲ್ಲಿ ನೀರನ್ನು ಹಾಕಿಕೊಂಡು ಅನ್ನದ ಸುತ್ತಲೂ ಎಲೆಯ ಬಲಭಾಗದಿಂದ ಪ್ರಾರಂಭಿಸಿ ಸುತ್ತುಗಟ್ಟಬೇಕು. ಬಲಗೈಯ

ಮಧ್ಯದಲ್ಲಿ ದೇವತೆಗಳಿರುವರು. ಆದ್ದರಿಂದ ಮಧ್ಯಭಾಗದಿಂದಲೇ ಪರಿಷೇಚನವನ್ನು ಮಾಡಬೇಕು.

**ಹಗಲಿನಲ್ಲಿ** – ಸತ್ಯ ಎನಿಸಿರುವ ಅನಿರುದ್ಧ ರೂಪವು ಋತನೆಂಬ ಮತ್ತೊಂದು ರೂಪದಿಂದ ವ್ಯಾಪ್ತವಾಗಿದೆ ಎಂದು ಚಿಂತಿಸಬೇಕು.

**ರಾತ್ರಿ** – ಋತವೆಂಬ ನಾರಾಯಣ ರೂಪವು, ಸತ್ಯವೆನಿಸಿರುವ ಭೋಜ್ಯ ಪದಾರ್ಥಗಳಲ್ಲಿರುವ ಅನಿರುದ್ಧನಿಂದ ವ್ಯಾಪ್ತನೆಂದು ಚಿಂತಿಸಬೇಕು.

## ೬. ಪರಿಷೇಚನದ ಅರ್ಥ

– ಮಧ್ಯಾಹ್ನ ಭೋಜನದಲ್ಲಿ "ಸತ್ಯಂ ತ್ವಾ ಋತೇನ ಪರಿಚಿಂಚಾಮಿ" ಎನ್ನಬೇಕು.
ರಾತ್ರಿ ಭೋಜನದಲ್ಲಿ "ಋತಂ ತ್ವಾ ಸತ್ಯೇನ ಪರಿಷಿಂಚಾಮಿ" ಎನ್ನಬೇಕು.

"ಸತ್ಯ" ಎಂಬಲ್ಲಿ "ಸತ್+ತ್+ಯ" ಎಂಬ ಮೂರು ಅಕ್ಷರಗಳಿದ್ದು ಅವು ವಾಯು|ಬ್ರಹ್ಮ+ಆದಿತ್ಯ ಎಂದರ್ಥ. ಆದ್ದರಿಂದ ನನ್ನ ದೇಹಕ್ಕೆ ಕಾರಣರಾದ ತಂದೆಯಲ್ಲಿ ಅಂತರ್ಯಾಮಿಯಾಗಿರುವ ಆದಿತ್ಯ, ಆದಿತ್ಯಾಂತರ್ಯಾಮಿ ಬ್ರಹ್ಮ-ವಾಯುಗಳು, ಅವರಲ್ಲಿ ನಿಯಾಮಕನಾಗಿರುವ ನಾರಾಯಣನೇ, ತ್ವಾಂ – ನಿನ್ನನ್ನು, ಋತೇನ ಸಹ – ಮಾತೃವಿನಲ್ಲಿರುವ ನಿನ್ನ ರೂಪದಿಂದ ಸಹಿತವಾಗಿಯೇ ಪರಿಷಿಂಚಾಮಿ, ಪರಿತ: ಷಿಂಚಾಮಿ – ವ್ಯಾಪ್ತನೆಂದು ಚಿಂತಿಸುತ್ತೇನೆ.

ಇನ್ನೊಂದು ಅರ್ಥ – ಸತ್+ತ್+ಯ ಎಂಬ ಸತ್ಯ ಶಬ್ದವನ್ನು ಬಿಡಿಸಿದಾಗ ಸತ್ ಎಂದರೆ ಸತ್ಯ ಎಂದರ್ಥ, "ತ"– ತಕಾರವಾದರೂ ಅನಿತ್ಯವಾಚಕವಾಗಿದೆ. ನಿತ್ಯ + ಅನಿತ್ಯಗಳನ್ನು ಹೊಂದಿಸುವವನು ಸತ್ಯ. ಅಗತ್ಯವಾದ ಅನ್ನದ ರಕ್ಷಣೆ, ನಿತ್ಯವಾದ ಮೋಕ್ಷವನ್ನು ಹೊಂದಿಸುವವನೇ ಸತ್ಯನು. ಇಂತಹ ಸತ್ಯನು "ಋತ" ಮೊದಲಾದ ಅನೇಕ ರೂಪಗಳಿಂದ ವ್ಯಾಪ್ತನು ಎಂದು ಚಿಂತಿಸಬೇಕು.

# ಚಿತ್ರಾಹುತಿ

ಪರಿಷೇಕವನ್ನು ಮಾಡಿದನಂತರ ಎಲೆಯ ಬಲಭಾಗದಲ್ಲಿ ಮೇಲಿನಿಂದಾಗಲೀ ಅಥವಾ ಕೆಳಗಿನಿಂದಾಗಲೀ ಹಸಿಯ ನೆಲ್ಲಿಕಾಯಿ ಗಾತ್ರದ ಅನ್ನವನ್ನು ಮಂತ್ರಪೂರ್ವಕವಾಗಿ ಚಿತ್ರಗುಪ್ತಾದಿಗಳಿಗೆ ಆಹುತಿ ತೆಗೆದಿಡುವುದು "ಚಿತ್ರಾಹುತಿ".

ಚಿತ್ರಾವತಿ ೨ ಅಥವಾ ೩ ಅಥವಾ ೪ ಅಥವಾ ೫ ಹೀಗೆ ಇಡಬಹುದು,
ಅವರವರ ಸಂಪ್ರದಾಯದಂತೆ.

೨ ಚಿತ್ರಾಹುತಿ – ಚಿತ್ರಾಯ ನಮ:, ಚಿತ್ರಾಗುಪ್ತಾಯ ನಮ: ಎಂದು ಉಚ್ಚರಿಸಿ ೨ ಆಹುತಿ ಇಡುವುದು. ಕೆಲವರು
ಚಿತ್ರಾಯ ನಮ: ಚಿತ್ರಗುಪ್ತಾಯ ನಮ: ಎಂದು ಹೇಳಿ ೧ ಆಹುತಿ ಇಟ್ಟು,
ಯಮಾಯ ನಮ: ಸರ್ವಭೂತೇಭ್ಯೋ ನಮ: – ಎಂದು ಹೇಳಿ ೧ ಆಹುತಿ ಇಡುವರು

೩ ಚಿತ್ರಾಹುತಿಗಳು – ಚಿತ್ರಾಯ ನಮ:, ಚಿತ್ರಾಗುಪ್ತಾಯ ನಮ: ಸರ್ವಭೂತೇಭ್ಯೋ ನಮ:

೪ ಚಿತ್ರಾಹುತಿಗಳು – ಚಿತ್ರಾಯ ನಮ:, ಚಿತ್ರಾಗುಪ್ತಾಯ ನಮ:
ಯಮಾಯ ನಮ: ಸರ್ವಭೂತೇಭ್ಯೋ ನಮ:

೫ ಚಿತ್ರಾಹುತಿಗಳು – ಕೆಲವರು ಚಿತ್ರ, ಚಿತ್ರಗುಪ್ತ, ಯಮ, ಸರ್ವಭೋತೇಭ್ಯ: – ಈ ನಾಲ್ಕರ ಜೊತೆಗೇ ಯಮಧರ್ಮಾಯ ನಮ: ಎಂದು ಬೇರೆಯಾಗಿ ಹೆಚ್ಚುವರಿಯಾಗಿ ಇಡುತ್ತಾರೆ. "ಯಮ" "ಯಮಧರ್ಮ" ಎಂಬ ಯಮನ ಉಗ್ರ ಮತ್ತು ಸೌಮ್ಯ ರೂಪಗಳ ತೃಪ್ತಿಗಾಗಿ ನೀಡುವರು.

- ಚಿತ್ರಾಹುತಿ ಹಾಗೂ ಪ್ರಾಣಾಹುತಿ  ಕಿರು ನೆಲ್ಲಿಕಾಯಿಯಷ್ಟು ಗಾತ್ರ ಇರಬೇಕು.
- ಎಲೆ ಹರಿದು ಹೋಗಿದ್ದರೆ ಎಲೆಯಿಂದ ಒಂದು ಮುಷ್ಟಿಯಷ್ಟು ಅನ್ನವನ್ನು ತೆಗೆದಿಡಬೇಕು. ಚಿತ್ರಾಹುತಿ ಇಡಬೇಕಾಗಿಲ್ಲ.

(ದಕ್ಷಿಣ ಕನ್ನಡದ ಬ್ರಹ್ಮಚಾರಿಗಳು ಚಿತ್ರಾಹುತಿಯನ್ನು ಇಡುವ ಸಂಪ್ರದಾಯವಿಲ್ಲ).

**ಏಕೆ ಚಿತ್ರಾಹುತಿ ನೀಡಬೇಕು?** – ನಾವು ಮಾಡಿದ ಧರ್ಮಾಧರ್ಮಗಳನ್ನು ಸ್ವಲ್ಪವೂ ವ್ಯತ್ಯಾಸವಾಗದಂತೆ ಬರೆದಿಟ್ಟದ್ದಕ್ಕಾಗಿ ಕೃತಜ್ಞತಾ ರೂಪವೇ ಈ ಚಿತ್ರಾಹುತಿಯೇ ಹೊರತು ಇದು ಚಿತ್ರಗುಪ್ತರಿಗೆ ಲಂಚವೆಂದು ಭಾವಿಸಬಾರದು.

ನಾವು ನಮ್ಮ ಜೀವನದಲ್ಲಿ ಗೊತ್ತಿದ್ದಾಗಲೀ, ಗೊತ್ತಿಲ್ಲದೆಯಾಗಲೀ, ಅನೇಕ ಪಾಪ ಕರ್ಮಗಳನ್ನು ಮಾಡಿದ್ದೇವೆ, ಮಾಡುತ್ತೇವೆ.  ನಮಗೆ ನಮ್ಮ ಪಾಪ–ಪುಣ್ಯಗಳ ಲೆಕ್ಕಾಚಾರ ಸಾಧ್ಯವಿಲ್ಲ.  ಮೃತರಾದ ಮೇಲೆ ನಾವು ಮಾಡಿದ ಪಾಪ–ಪುಣ್ಯಗಳಿಗೆ ತಕ್ಕಂತೆ ಶಿಕ್ಷೆ–ರಕ್ಷೆಗಳಿರುತ್ತವೆ.  ನಮ್ಮ ಧರ್ಮಾಧರ್ಮಗಳನ್ನು ಲೆಕ್ಕವಿಡುವ ಕಾರ್ಯದಲ್ಲಿ ಬ್ರಹ್ಮನ ಮಾನಸ ಪುತ್ರರಾದ ೧೨ ಶ್ರವಣ ದೇವತೆಗಳು ಚಿತ್ರಗುಪ್ತರಿಗೆ ಸಹಾಯಕರಾಗಿರುವರು.  ಇವರಿಗೆ ದೂರದರ್ಶನ, ದೂರಶ್ರವನ ಶಕ್ತಿಯಿದ್ದು ಮಾನವರು ಮಾಡುವ ಶುಭಾಶುಭಗಳನ್ನು ವಿವೇಚಿಸಿ ಚಿತ್ರಗುಪ್ತರಿಗೆ ನಿವೇದಿಸುವರು. ಹೀಗೆ ತಾವು ಬರೆದ ಸಂಗತಿಗಳನ್ನು ಶ್ರವಣಿಯರ ಮಾತಿನಂತೆ ಸರಿಹೊಂದಿಸಿ ಅನಂತರ ಯಮಧರ್ಮರಾಜನಿಗೆ ತಿಳಿಸುವರು.  "ಅಮವರ್ತಿ"ಆದ ಯಮಧರ್ಮರಾಜನು ಈ ಸಂಪೂರ್ಣ ವಿವರವನ್ನು ಪರಿಶೀಲಿಸಿ ಶಿಕ್ಷೆಯನ್ನು ನಿಗದಿ ಮಾಡುವನು.  ಆದ್ದರಿಂದ ನಾವು ನೀಡುವ ನಾಲ್ಕು "ಅಹುತಿಗಳು" – ನಮ್ಮ ಧರ್ಮಕಾರ್ಯಗಳನ್ನು ಬರೆದಿರುವ ಚಿತ್ರನಿಗೆ ಒಂದು ಆಹುತಿ, ಅಧರ್ಮಕಾರ್ಯಗಳನ್ನು ಬರೆದಿರುವ ಚಿತ್ರಗುಪ್ತನಿಗೆ – ಒಂದು ಆಹುತಿ, ಯಾವ ಪಾಪಕ್ಕೆ ಯಾವ ಶಿಕ್ಷೆ ಎಂದು ವಿವೇಚಿಸಿ ಪಕ್ಷಪಾತವಿಲ್ಲದೆ ಶಿಕ್ಷೆಯನ್ನು ವಿಧಿಸುವ ಯಮಧರ್ಮನಿಗೆ ಒಂದು ಆಹುತಿ, ಮತ್ತು ನಾವು ಮಾಡುವ ಪುಣ್ಯ ಪಾಪಗಳನ್ನು ಪಂಚಭೂತಗಳು ಸಾಕ್ಷೀಭೂತರಾಗಿ ನೋಡುತ್ತಿರುತ್ತವೆ ಆದ್ದರಿಂದ ಇವುಗಳಿಗೆ ನಾಲ್ಕನೇ ಆಹುತಿ.

## ಆಪೋಶನ –

- ಭೋಜನಕ್ಕೆ ಮೊದಲು ತುಳಸೀದಳಯುಕ್ತವಾದ ಸಾಲಿಗ್ರಾಮ ತೀರ್ಥದಿಂದ ಆಪೋಶನವನ್ನು ಸ್ವೀಕರಿಸಬೇಕು. ಇದರಿಂದ ಹತ್ತು ಕೋಟಿ ಯಜ್ಞದ ಫಲ ಲಭಿಸುತ್ತದೆ.

- ಆಪೋಶನವನ್ನು ಸ್ವೀಕರಿಸದೆ ಭುಂಜಿಸಿದರೆ ನೂರೆಂಟು ಗಾಯತ್ರಿ ಜಪ ಪ್ರಾಯಶ್ಚಿತ್ತವಾಗಿ ಮಾಡಬೇಕು. ಆಪತ್ಕಾಲದಲ್ಲಿ ಆಪೋಶನವಿಲ್ಲದೆ ಭುಂಜಿಸಿದರೆ ದೋಷವಿಲ್ಲ. ಆಪೋಶನವನ್ನು ಬಲಭಾಗದಲ್ಲೇ ಸ್ವೀಕರಿಸಬೇಕು.
- ಪರಿಷೇಕದ ನೀರಿನ ಶೇಷದಿಂದ ಆಪೋಷನ ನಿಷಿದ್ಧವಾಗಿದೆ. ಆಪೋಶನ ಸ್ವೀಕರಿಸುವಾಗ ಶಬ್ಧ ಮಾಡಬಾರದು.

## ಆಪೋಶನದ ಮಂತ್ರ – ಅರ್ಥ –

ಭೋಜನದ ಪೂರ್ವದಲ್ಲಿ ಅಮೃತೋಪಿಸ್ತರಣಮಸೀತಿ ಸ್ವಾಹಾ ।

ಅರ್ಥ – ಭೋಜನವು ಒಂದು ಯಜ್ಞವಾಗಿದೆ. ಈ ಯಜ್ಞವು ವಸ್ತ್ರಹೀನವಾಗಿರಬಾರದು. ಭಗವಂತನಿಗೆ ನಾವು ನೀಡುವ ವಸ್ತ್ರವೇ ವಾಯು ದೇವರು ಎಂದು ಭಾವಿಸಬೇಕು.

ಹೇ ಅಮೃತ – ವಾಯುವೇ, ನಿನೂ ಭಗವಂತನಿಗೆ
ಉಪಸ್ತರಣಂ ಅಸಿ – ಉಟ್ಟುಕೊಳ್ಳುವ ವಸ್ತ್ರವಾಗಿರುವೆ

## ಭೋಜನದ ನಂತರ – ಅಮೃತೋಪಿ ದಾನಮಸಿ ಸ್ವಾಹಾ ।

ಹೇ ಅಮೃತ – ವಾಯುವೇ, ನೀನು ಭಗವಂತನಿಗೆ
ಅಪಿಧಾನಂ – ಹೊದ್ದುಕೊಳ್ಳುವ ವಸ್ತ್ರವಾಗಿ ಅಸಿ – ಇರುವೆ

ಭೋಜನವು ಸಹ ಒಂದು ಯಜ್ಞವೆನಿಸಿದೆ. ವೈಶ್ವಾನರನ ಸ್ವರೂಪವನ್ನು ತಿಳಿದು ಭೋಜನ ಮಾಡಿದರೆ ಸಕಲ ಭೂತಾದಿಗಳಲ್ಲಿ ಹೋಮ ಮಾಡಿದ ಫಲ ಲಭಿಸುತ್ತದೆ. ಹೀಗೆ ತಿಳಿಯದೆ ಹೋಮಿಸಿದರೆ ಬೂ:ದಿಯಲ್ಲಿ ಹೋಮ ಮಾಡಿದಂತೆ ವ್ಯರ್ಥ.

# ಪಂಚಪ್ರಾಣಾಹುತಿಗಳು

೧. **ಪ್ರಾಣಾಯಾ ಸ್ವಾಹಾ** – ಪ್ರಾಣವಾಯುವು ತೃಪ್ತನಾಗುವನು – ಇದರಿಂದ ಸೂರ್ಯಮಂಡಲಾಭಿಮಾನಿಯಾದ ಆದಿತ್ಯನು ತೃಪ್ತನಾಗಿ, ದ್ಯುಲೋಕಾಭಿ ಮಾನಿನಿಯಾದ ಭಾರತಿಯು ತೃಪ್ತಳಾದರೆ, ಮುಖ್ಯಪ್ರಾಣನು ತೃಪ್ತನಾಗಿ, ಅವನು ತೃಪ್ತನಾದರೆ ಮಹಾಲಕ್ಷ್ಮೀ, ಅವಳು ತೃಪ್ತಳಾದರೆ ವೈಶ್ವಾನ ರೂಪಿಯಾದ ಶ್ರೀಹರಿಯು ತೃಪ್ತನಾಗುವನು.

೨. **ಅಪಾಯನಾಯ ಸ್ವಾಹಾ** – ಅಪಾನಾಭಿಮಾನಿಯು ತೃಪ್ತನಾಗುವನು – ಇವನ ತೃಪ್ತಿಯಿಂದ ವಾಗಭಿಮಾನಿಯಾದ ಅಗ್ನಿಯು, ಅವನಿಂದ ಭೂತಾಗ್ನಿಯು ತೃಪ್ತವಾಗಿ, ನಂತರದಲ್ಲಿ ಧರಾದೇವಿಯು, ನಂತರ ಆಕಾಶಾಭಿಮಾನಿ ಭಾರತೀದೇವಿ, ನಂತರ ಮುಖ್ಯಪ್ರಾಣ, ಲಕ್ಷ್ಮೀದೇವಿ, ನಾರಾಯಣರು ಕ್ರಮವಾಗಿ ತೃಪ್ತರಾಗುವರು.

೩. **ವ್ಯಾನಾಯ ಸ್ವಾಹಾ** – ವ್ಯಾನಾಭಿಮಾನಿ ಚಂದ್ರ, ನಂತರದಲ್ಲಿ ಶ್ರೋತ್ರಾಭಿಮಾನು – ನಂತರ ಚಂದ್ರಮಂಡಲಾಭಿಮಾನಿ ದಿಕ್ ನಾಮಕ ಭಾರ್ಯೆ, ವಾಯು ಮತ್ತು ಲಕ್ಷ್ಮೀನಾರಾಯಣರು ತೃಪ್ತರಾಗುವರು.

೪. **ಉದಾನಾಯ ಸ್ವಾಹಾ** – ಉದಾನಾಭಿಮಾನಿ– ನಂತರ – ಭೂತವಾಯ್ವಭಿಮಾನಿಯೂ, ಆಕಾಶಾಭಿಮಾನಿಯೂ, ವಾಯುದೇವರು ಮತ್ತು ಲಕ್ಷ್ಮೀನಾರಾಯಣರು ತೃಪ್ತರಾಗುವರು.

೫. **ಸಮಾನಾಯ ಸ್ವಾಹಾ** – ಸಮಾನಾಭಿಮಾನಿ ಇಂದ್ರ ದೇವರು, ಮನೋಭಿಮಾನಿಯೂ, ಪರ್ಜನ್ಯಾಭಿಮಾನಿಯೂ, ನಂತರದಲ್ಲಿ ವಿದ್ಯುನ್ನಾಮಕಳಾದ ಭಾರತಿ – ಮುಖ್ಯಪ್ರಾಣ, ಲಕ್ಷ್ಮೀ ನಾರಾಯಣರು ತೃಪ್ತರಾಗುವರು.

೬. **ಬ್ರಹ್ಮಣೇ ಸ್ವಾಹಾ** – ಮೇಲಿನ ಐದು ಆಹುತಿಗಳು ಪ್ರಧಾನವಾಯುವು ಪ್ರಪಂಚದ ಆಗುಹೋಗುಗಳನ್ನು ಸುಸೂತ್ರವಾಗಿ ನಡೆಸುವಂತೆ ಮಾಡುವುದಕ್ಕಾಗಿ

ಪಂಚಪ್ರಾಣಾಹುತಿಗಳನ್ನು ನೀಡಿದರೆ, – ಆರನೇ ಆಹುತಿಯನ್ನು ಭಗವಂತನ ಆಜ್ಞೆಯಿಂದ ಸೃಷ್ಟಿ ಮಾಡಿದವರು ಬ್ರಹ್ಮದೇವರಿಗೆ ಸಮರ್ಪಣ ಮಾಡಬೇಕು.

- ಪ್ರಾಣಾಹುತಿ ಕಾಲದಲ್ಲಿ ಮಾತನಾಡಬಾರದು.
- ಪ್ರಾಣಾಹುತಿಯನ್ನು ದಂತದಿಂದ ಸ್ಪರ್ಶ ಮಾಡಬಾರದು
- ಪ್ರಾಣಾಹುತಿಗಿಂತ ಮೊದಲು ನಮ್ಮ ಎಲೆಗೆ ಪಿತೃಶೇಷವನ್ನು ಹಾಕಿಕೊಳ್ಳಬಾರದು/ಹಾಕಿಸಿಕೊಳ್ಳಬಾರದು

ಸಂಗ್ರಹ – ನರಹರಿ ಸುಮಧ್ವ (9916904341)

ಆಧಾರ – ಚತುರ್ವೇದಿ ವೇದವ್ಯಾಸಾಚಾರ್ಯರ

"ಭೋಜನ ಪದ್ಧತಿ"